# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2021-22ನೇ ಸಾಲಿನ ಮೀನುಗಾರಿಕೆ ಇಲಾಖೆಯ ಲೆಕ್ಕ ಶೀರ್ಷಿಕೆ "2405-ಮೀನುಗಾರಿಕೆ ಮತ್ತು 4405-ಮೀನುಗಾರಿಕೆ ಮೇಲಿನ ಬಂಡವಾಳ ವೆಚ್ಚಗಳು ಅಡಿಯಲ್ಲಿ ತೃತೀಯ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:-1) ಆದೇಶ ಸಂಖ್ಯೆ: ಪಸಂಮೀ/ಇ-166/ಮೀಇಯೋ/2021, ದಿನಾಂಕ: 26-04-2021.

2) ಆದೇಶ ಸಂಖ್ಯೆ: ಪಸಂಮೀ/ಇ-164/ಮೀಇಯೋ/2020, ದಿನಾಂಕ: 15-04-2021,19-04-2021, 28-04-2021 ಮತ್ತು 07-05-2021.

3) ಆದೇಶ ಸಂಖ್ಯೆ: ಪಸಂಮೀ/ಇ-198/ಮೀಇಯೋ/2021, ದಿನಾಂಕ: 01-07-2021, 16-07-2021, 04-09-2021 ಮತ್ತು 01-10-2021.

4) ಪತ್ರ ಸಂಖ್ಯೆ: DoF-ADMNOBGT/17/2021, ದಿನಾಂಕ: 05-10-2021.

******

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ಮೀನುಗಾರಿಕೆ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ವಿವಿಧ ರಾಜ್ಯ ವಲಯ, ಕೇಂದ್ರ ವಲಯ ಮತ್ತು ಕೇಂದ್ರ ಪುರಸ್ಕೃತ ಜಿಲ್ಲಾ ಪಂಚಾಯತ್ ಯೋಜನೆಗಳನ್ನು ಸಂಬಂಧಪಟ್ಟ ಹುದ್ದೆಗಳೊಂದಿಗೆ 2021-22ನೇ ಸಾಲಿಗೆ ಮುಂದುವರೆಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶಗಳಲ್ಲಿ, 2021-22ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಲೆಕ್ಕ ಶೀರ್ಷಿಕೆ 2405-00-001-0-01 ರಡಿ ರೂ.447.50 ಲಕ್ಷಗಳನ್ನು ಮತ್ತು ರೂ.120.50 ಲಕ್ಷಗಳನ್ನು ವೇತನ ಹಾಗೂ ಕಛೇರಿ ವೆಚ್ಚಕ್ಕಾಗಿ ಮತ್ತು 2021-22ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಲೆಕ್ಕ ಶೀರ್ಷಿಕೆ "2405-ಮೀನುಗಾರಿಕೆ" ಹಾಗೂ "4405-ಮೀನುಗಾರಿಕೆ ಮೇಲಿನ ಬಂಡವಾಳ ವೆಚ್ಚಗಳು" ರಾಜ್ಯವಲಯದಡಿ ರೂ.3627.44 ಲಕ್ಷ ಮತ್ತು ರೂ.1544.75 ಲಕ್ಷಗಳನ್ನು ಪ್ರಥಮ ಕಂತಿನ ಅನುದಾನವಾಗಿ ಬಿಡುಗಡೆ ಮಾಡಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಆದೇಶದಲ್ಲಿ, 2021-22ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಲೆಕ್ಕ ಶೀರ್ಷಿಕೆ "2405-ಮೀನುಗಾರಿಕೆ" ಹಾಗೂ "4405-ಮೀನುಗಾರಿಕೆ ಮೇಲಿನ ಬಂಡವಾಳ ವೆಚ್ಚಗಳು" ರಾಜ್ಯವಲಯದಡಿ ರೂ.2105.50 ಲಕ್ಷಗಳನ್ನು, ರೂ. 2600.00 ಲಕ್ಷಗಳನ್ನು ಮತ್ತು ರೂ.531.25 ಲಕ್ಷಗಳನ್ನು ಮತ್ತು ರೂ.151.50 ಲಕ್ಷಗಳನ್ನು ದ್ವಿತೀಯ ಕಂತಿನ ಅನುದಾನ ಬಿಡುಗಡೆ ಮಾಡಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರದಲ್ಲಿ, 2021-22ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2405-ಮೀನುಗಾರಿಕೆ ಮತ್ತು ಶೇ.70 ಕ್ಕಿಂತಲೂ ಅಧಿಕ ವೆಚ್ಚವಾಗಿರುವ ಲೆಕ್ಕ ಶೀರ್ಷಿಕೆಗಳಡಿ ಅನುಬಂಧದಲ್ಲಿ ನಮೂದಿಸಿರುವಂತೆ ತೃತೀಯ ಕಂತಿನ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

Kamakshi U.A

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ ಇ-274 ಮೀಇಯೋ 2021, ಬೆಂಗಳೂರು**
**ದಿನಾಂಕ: 13-10-2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2021-22ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಲೆಕ್ಕ ಶೀರ್ಷಿಕೆ 2405-ಮೀನುಗಾರಿಕೆ ಮತ್ತು 4405-ಮೀನುಗಾರಿಕೆ ಮೇಲಿಣ ಬಂಡವಾಳ ವೆಚ್ಚದಡಿ ರೂ. 4,523.55 ಲಕ್ಷ (ನಾಲ್ಕು ಸಾವಿರದ ಐದುನೂರ ಇಪ್ಪತ್ತಮೂರು ಲಕ್ಷದ ಐವತ್ತೈದು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಕೆಳಕಂಡ ಲೆಕ್ಕ ಶೀರ್ಷಿಕೆಗಳ ಮುಂದೆ ನಮೂದಿಸಿರುವಂತೆ ತೃತೀಯ ಕಂತಿನ ಅನುದಾನ ಬಿಡುಗಡೆ ಮಾಡಿ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಯೋಜನೆ ಹೆಸರು | ಲೆಕ್ಕ ಶೀರ್ಷಿಕೆ | ಆಯವ್ಯಯ 2021-22 ರಲ್ಲಿ ಒದಗಿಸಲಾದ ಅನುದಾನ | 2021-22 ರಲ್ಲಿ ತೃತೀಯ ಕಂತಿನಲ್ಲಿ ಬಿಡುಗಡೆ ಮಾಡಲಾದ ಅನುದಾನ |
|---|---|---|---|---|
| 1) | ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ | 2405-00-101-0-03 | | |
| | ಸಹಾಯಧನ | 106 | 405.00 | 101.25 |
| 2) | ಮೀನುಗಾರಿಕೆ ದೋಣಿಗಳಿಗೆ ಡೀಸೇಲ್ ಮಾರಾಟ ತೆರಿಗೆ ಮರುಪಾವತಿ | 2405-00-103-0-23 | | |
| | ಧನ ಸಹಾಯ/ ಪರಿಹಾರ | 100 | 10300.00-562.00 = 9738.00 | 2294.00 |
| 3) | ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ | 2405-00-110-0-02-106 | 125.00 | 31.25 |
| 4) | ಮಂಜುಗಡ್ಡೆ ಸ್ಥಾವರ ಉಪಯೋಗಿಸುವ ವಿದ್ಯುತ್ ಮೇಲೆ ಸಹಾಯಧನ | 2405-00-110-0-03-106 | 400.00 | 100.00 |
| 5) | ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ | 2405-00-101-0-66 | | |
| | ಪರಿಶಿಷ್ಟ ಜಾತಿ ಉಪ ಯೋಜನೆ | 422 | 35.22 | 8.80 |

Kamakshi U.A

| | | | | |
|---|---|---|---|---|
| 6) | ಜಲಾಶಯಗಳಲ್ಲಿ ಮೀನುಮರಿ ಬಿತ್ತನೆ | 2405-00-101-0-54-051 | 200.00 | 50.00 |
| 7) | ಮೀನುಗಾರಿಕೆ ಸಹಕಾರಿ ಸಂಸ್ಥೆಗಳು / ಮೀನುಗಾರರ ಕಲ್ಯಾಣ | 2405-00-120-0-07-106 | 496.00 + 562.00 (ಪುನರ್ ವಿನಿಯೋಗ) | 124.00 |
| 8) | ನೀಲಿಕ್ರಾಂತಿ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ ಕೇಂದ್ರ ಪುರಸ್ಕೃತ ಯೋಜನೆ | 2405-00-101-0-58 | | |
| | ಸಹಾಯಧನ | 106 | 2546.00 | 636.50 |
| | ಗಿರಿಜನ ಉಪ ಯೋಜನೆ | 423 | 160.00 | 40.00 |
| 9) | ಸಂಕಷ್ಟ ಪರಿಹಾರ ನಿಧಿಗೆ ಅಂಶದಾನಗಳು | 2405-00-103-0-15-104 | 1.00 | 0.25 |
| 10) | ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿಕೊಡುವುದು | 2405-00-195-0-01-106 | 50.00 | 12.50 |
| | | ಒಟ್ಟು | 14718.47 | 3,398.55 |
| 11) | ಮೀನುಗಾರಿಕ ಕೊಂಡಿ ರಸ್ತೆಗಳ, ಸೇತುವೆಗಳ ಮತ್ತು ಜೆಟ್ಟಿಗಳ ನಿರ್ಮಾಣ-ನಬಾರ್ಡ್ ಸಹಾಯ | 4405-00-800-2-03-436 | 2000.00 | 500.00 |
| 12) | ಮೀನುಗಾರಿಕೆ ಬಂದರುಗಳ ನಿರ್ಮಾಣ ಕೇಂದ್ರ ಪುರಸ್ಕೃತ ಯೋಜನೆ | 4405-00-103-6-01-139 | 2500.00 | 625.00 |
| | | ಒಟ್ಟು | 4500.00 | 1125.00 |
| | | ಒಟ್ಟು | 18,812.22 | 4,523.55 |

ಮೇಲ್ಕಂಡಂತೆ ಬಿಡುಗಡೆ ಮಾಡಲಾದ ಅನುದಾನದ ಹಣವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸಿ ಕೊಂಡು ಕಡ್ಡಾಯವಾಗಿ ಹಣ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತು ನಿಯಮಗಳು 2000ಗಳನ್ನು ಹಾಗೂ ಖರೀದಿ ನಿಯಮಗಳನ್ನು ಪಾಲಿಸತಕ್ಕದ್ದು ಮತ್ತು ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಖ2/ಪಿಎಂಯು/92/2015-16, ದಿನಾಂಕ: 27-03-2018ರ ಕ್ರಮ ಸಂಖ್ಯೆ 01 ರಿಂದ 04 ರಲ್ಲಿ ಸೂಚಿಸಿರುವಂತೆ ಅನುಷ್ಠಾನಗೊಳಿಸತಕ್ಕದ್ದು.

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/ಇ-166/ಮೀಇಯೋ/2021, ದಿನಾಂಕ: 26-04-2021 ರನ್ವಯ ಮುಂದುವರೆಸಲಾದ ಯೋಜನೆಗಳನ್ನು ಅನುಮೋದಿಸಿರುವಂತೆ ಅನುಷ್ಠಾನಗೊಳಿಸತಕ್ಕದ್ದು.

Kamakshi U.A.

ಸದರಿ ವೆಚ್ಚವನ್ನು 2021-22ನೇ ಸಾಲಿನ ಲೆಕ್ಕ ಶೀರ್ಷಿಕೆ "2405-ಮೀನುಗಾರಿಕೆ ಮತ್ತು 4405-ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚಗಳು" ಅಡಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್ ಡಿ/1/ಟಿಎಫ್ ಪಿ/2021, ದಿನಾಂಕ: 30-09-2021 ರಲ್ಲಿ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ವಿತ್ತಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Kamakshi U.A.
(ಕಾಮಾಕ್ಷಿ ಯು.ಎ.) 13/10/21
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
5) ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ, ತೋಟಗಾರಿಕೆ ಮತ್ತು ಪಸಂಮೀ ಇಲಾಖೆ
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 4), ವಿಧಾನಸೌಧ, ಬೆಂಗಳೂರು.
7) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8) ಸಂಬಂಧಪಟ್ಟವರುಗಳಿಗೆ - ಮೀನುಗಾರಿಕೆ ನಿರ್ದೇಶಕರ ಮುಖಾಂತರ.
9) ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.